(13)

# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
## ಕೇಂದ್ರ ಕಛೇರಿ : ಸಂಚಾರ ಇಲಾಖೆ : ಬೆಂಗಳೂರು

ಸಂಖ್ಯೆ:ಕರಾಸಾ/ಕೇಕ/ಸಂ/ಬಿಸಿಡಿ-31/ 2154 /15-16 ದಿನಾಂಕ: 01/07/2015.

**ಸುತ್ತೋಲೆ ಸಂಖ್ಯೆ : 1297**
**(ಸಂಚಾರ ಇಲಾಖೆಯಿಂದ ಹೊರಡಿಸಲಾಗಿದೆ)**

**ವಿಷಯ:** ಕರಾರಸಾ ನಿಗಮದ ಫ್ಲೈ ಬಸ್ ಸೇವೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗೆ ಹಾಗೂ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕೌಂಟರ್‌ನಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ವಿಶೇಷ ಭತ್ಯೆ ನೀಡುವ ಬಗ್ಗೆ.

*********

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನಿಯಂತ್ರಣ ಸಿಬ್ಬಂದಿಗಳಿಗೆ ಹಾಗೂ ವಾಯುವಜ್ರ ಸೇವೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗಳಿಗೆ ನೀಡುತ್ತಿರುವ ವಿಶೇಷ ಭತ್ಯೆದಂತೆ ಕರಾರಸಾ ನಿಗಮದವತಿಯಿಂದ ಕಾರ್ಯಾಚರಣೆ ಮಾಡುತ್ತಿರುವ ಫ್ಲೈ ಬಸ್ ಸೇವೆಗಳಲ್ಲಿ ಕರ್ತವ್ಯ ನಿರ್ವಹಿಸುವ ಚಾಲನಾ ಸಿಬ್ಬಂದಿಗೆ ಹಾಗೂ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಕೌಂಟರ್‌ನಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ **ಪ್ರತಿ ದಿನದ ಕರ್ತವ್ಯ ನಿರ್ವಹಣೆಗೆ ವಿಶೇಷ ಭತ್ಯೆ ರೂ 100/-ನ್ನು** ನೀಡಲು ಆದೇಶಿಸಲಾಗಿದೆ.

ಪ್ರತಿ ತಿಂಗಳು ಕನಿಷ್ಠ 22 ದಿನಗಳು ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳು ಮಾತ್ರ ಈ ವಿಶೇಷ ಭತ್ಯೆಗೆ ಅರ್ಹರಾಗಿರುತ್ತಾರೆ. ಈ ವಿಶೇಷ ಭತ್ಯೆಯನ್ನು ಪ್ರತಿ ತಿಂಗಳ ಸಂಬಳದಲ್ಲಿ ಸೇರಿಸಿ ಪಾವತಿಸುವುದು.

ಪ್ರತಿ ಬಾರಿಯೂ ವಾಹನದ ಹೊರಭಾಗ ಮತ್ತು ಒಳಭಾಗದ ಶುಚಿತ್ವ, ಕರ್ಟನ್‌ಗಳು, ಮ್ಯಾಟ್‌ಗಳು, ಆಸನಗಳು, ಶೌಚಾಲಯಗಳು ಒಳ್ಳೆಯ ಸ್ಥಿತಿಯಲ್ಲಿರುವಂತೆ ಪರಿಶೀಲಿಸಿಕೊಂಡು ಕಾರ್ಯಾಚರಣೆ ಮಾಡುವುದು ಹಾಗೂ ಶುದ್ದವಾದ ಸಮವಸ್ತ್ರ ಧರಿಸುವುದು. ಒಂದು ವೇಳೆ ಸಾರ್ವಜನಿಕ ಪ್ರಯಾಣಿಕರಿಂದ ದೂರು ಬಂದಲ್ಲಿ ಆ ತಿಂಗಳ ವಿಶೇಷ ಭತ್ಯೆ ನೀಡಲಾಗುವುದಿಲ್ಲ.

ಸುತ್ತೋಲೆಯ ಸೂಚನೆಗಳು ದಿನಾಂಕ: **01/07/2015**ರಿಂದ ಜಾರಿಗೆ ಬರುತ್ತವೆ. ಈ ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿ ನೀಡುವುದು.

(ಸಹಿ)

**ವ್ಯವಸ್ಥಾಪಕ ನಿರ್ದೇಶಕರು**

**ಪ್ರತಿಯನ್ನು :**

ವ್ಯವಸ್ಥಾಪಕ ನಿರ್ದೇಶಕರು, ಬೆಮಸಾಸಂ/ವಾಕರಸಾಸಂ/ಈಕರಸಾಸಂ ರವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ಎಲ್ಲಾ ಇಲಾಖಾ ಮುಖ್ಯಸ್ಥರು, ಕರಾರಸಾನಿ, ಕೇಂದ್ರ ಕಛೇರಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

ಎಲ್ಲಾ ವಿಭಾಗ ನಿಯಂತ್ರಣಾಧಿಕಾರಿಗಳು, ಕರಾರಸಾನಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಕರಾರಸಾ ನಿಗಮ, ಕೇಂದ್ರ ಕಛೇರಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.

ಹಿರಿಯ/ಆಪ್ತ ಕಾರ್ಯದರ್ಶಿ, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಭ:ಜಾ)/ ನಿರ್ದೇಶಕರು(ಸಿ:ಪ), ಕರಾರಸಾ ನಿಗಮ ರವರ ಮಾಹಿತಿಗಾಗಿ ಕಳುಹಿಸಲಾಗಿದೆ.